## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಓ ಎಸ್ ಸಂಖ್ಯೆ: 117/2016

**ಸಾಕ್ಷಿಯನ್ನು ದಿಃ25.03.2025 ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.**

| | | |
|---|---|---|
| ಹೆಸರು | ಬೋರೇಗೌಡ | ಡಿ ಡಬ್ಲ್ಯೂ:4 |
| ತಂದೆಯ ಹೆಸರು | ಕೆಂಪೇಗೌಡ ಊರ್ಫ್ ಕರೀಗೌಡ | |
| ವಯಸ್ಸು | 64 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸಸ್ಥಳ | ಗೊಲ್ಲನಬೀಡು, ಹೆಚ್ ಡಿ ಕೋಟೆ | |

**ಮುಖ್ಯ ವಿಚಾರಣೆ ಃ 2 ನೇ ಪ್ರತಿವಾದಿ ಪರ ಶ್ರೀ ಸಿ ಆರ್ ವಕೀಲರಿಂದ ಃ**

ಈ ಪ್ರಕರಣದಲ್ಲಿ ನ್ಯಾಯಾಲಯದಿಂದ ಬಂದ ಸಮನ್ಸ್ ನ ಮೇರೆಗೆ ನ್ಯಾಯಾಲಯಕ್ಕೆ ಹಾಜರಾಗಿದ್ದೇನೆ. ನನಗೆ ಬಂದ ಸಮನ್ಸ್‌ನ್ನು ಈಗ ನೋಡುತ್ತಿದ್ದು ನಿಡಿ 100 ಎಂದು ಗುರುತಿಸಲಾಯಿತು. ಕೆಂಪೇಗೌಡರು ತಮ್ಮ ಮಕ್ಕಳ ಹೆಸರಿಗೆ ಮೃತ್ಯು ಪತ್ರ ಮಾಡಬೇಕೆಂದು ನಮ್ಮ ಬಳಿ ಹೇಳಿದ್ದರು. ನಾವು ಕೆಂಪೇಗೌಡರ ತಮ್ಮನ ಅಳಿಮಯ್ಯನಾಗಿದ್ದರಿಂದ ನನಗೆ ವಿಷಯ ಹೇಳಿದ್ದರು. ದಿನಾಂಕ 24.04.2013 ರಂದು ಮೃತ್ಯು ಪತ್ರ ಮಾಡಿದ್ದಾರೆ. ಸದರಿ ಮೃತ್ಯು ಪತ್ರದಲ್ಲಿ ತನ್ನ ಸ್ವತ್ತುಗಳು ಮಕ್ಕಳಾದ ಕೆಂಡಗೆಣ್ಣೇಗೌಡ, ಶಾಂತರಾಜು ಮತ್ತು ಮೊಮ್ಮಗನಾದ ಕುಮಾರನಿಗೆ ಸೇರಬೇಕೆಂದು ಕೆಂಪೇಗೌಡರು ಬರೆಸಿದ್ದರು. ಅಸ್ವಾಳು ಗ್ರಾಮ, ಅನ್ನರಾಯಪುರ ಗ್ರಾಮ ಮತ್ತು ಕಾವಲ್ ಗ್ರಾಮದ ಸ್ವತ್ತುಗಳ ಬಗ್ಗೆ ಮೃತ್ಯು ಪತ್ರ ಮಾಡಿದ್ದಾರೆ. ಪತ್ರವನ್ನು ವಕೀಲರಾದ ಮಂಜುನಾಥ ಎಂಬುವವರು ಬರೆದಿದ್ದಾರೆ. ಸದರಿ ಮೃತ್ಯು ಪತ್ರಕ್ಕೆ ನಾನು ಮತ್ತು ರಾಮನಾಯ್ಕರವರು ಸಾಕ್ಷಿದಾರರಾಗಿ ಸಹಿ ಹಾಕಿದ್ದೇವೆ. ನನ್ನ ಸಹಿಯನ್ನು ನೋಡಿದರೆ ಗುರುತಿಸುತ್ತೇನೆ.

ನಿಪಿ 84 ರಲ್ಲಿ ಸಾಕ್ಷಿ ತನ್ನ ಸಹಿಯನ್ನು ಗುರುತಿಸುತ್ತಾರೆ. ಆದರೆ ಸದರಿ ದಾಖಲೆ ದೃಢೀಕೃತ ನಕಲಾಗಿದ್ದರಿಂದ ಸಾಕ್ಷಿಯ ಸಹಿಯನ್ನು ನಿಶಾನೆಯಾಗಿ ಗುರುತಿಸಿಕೊಂಡಿರುವುದಿಲ್ಲ.

**ಪಾಟೀ ಸವಾಲುಃ ವಾದಿ ಪರ ಶ್ರೀ ಬಿ ಆರ್ ಎಲ್ ವಕೀಲರಿಂದಃ**

ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.